


# ಏಲಿಯನ್ ಹೋಲುವ ಆರ್ಕಿಡ್!



ಕ್ಯಾಲ್ಸಿಯೋಲೇರಿಯಾ ಯೂನಿಫ್ಲೋರಾ ಎಂಬ ವೈಜ್ಞಾನಿಕ ಹೆಸರುಳ್ಳ ಈ ಏಲಿಯನ್ ಸಸ್ಯವು ನಿತ್ಯಹರಿದ್ವರ್ಣ ಪ್ರದೇಶ ಹಾಗೂ ದಕ್ಷಿಣ ಅಮೆರಿಕ ಪ್ರದೇಶಗಳಲ್ಲಿ ಬೆಳೆಯುವ ಆರ್ಕಿಡ್ ಜಾತಿಯ ಸಸ್ಯವಾಗಿದ್ದು ಒಂದೇ ನೋಟಕ್ಕೆ ಅನ್ಯಗ್ರಹ ಜೀವಿಯ ಆಕಾರವನ್ನು ಹೋಲುವುದರಿಂದಲೇ ಇದಕ್ಕೆ ಏಲಿಯನ್ ಸಸ್ಯವೆಂದು ಕರೆಯುವರು.

ದಕ್ಷಿಣ ಧ್ರುವ ಪ್ರದೇಶಗಳ ಸಮೀಪದಲ್ಲಿ ಹೆಚ್ಚಾಗಿ ಕಂಡುಬರುವ ಈ ಏಲಿಯನ್ ಸಸ್ಯಗಳು ಪರ್ವತ ಪ್ರದೇಶಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತವೆ. ಬೇರುಗಳು ಆಳವಿಲ್ಲದ, ಕೇವಲ ನಾಲ್ಕರಿಂದ ಐದು ಇಂಚುಗಳಷ್ಟು ಎತ್ತರಕ್ಕೆ ಮಾತ್ರ ಬೆಳೆಯುವ ಈ ಸಸ್ಯಗಳ ಹೂವುಗಳು ಎರಡು ಅಂಗುಲದಷ್ಟು ಉದ್ದವಿರುತ್ತವೆ. ಹೂವುಗಳು ಪ್ರಾರಂಭದಲ್ಲಿ ಕೇಸರಿ ಅಥವಾ ಹಳದಿ ಬಣ್ಣವಿದ್ದು ಬೆಳೆದಂತೆಲ್ಲಾ ಗಾಢ ಕೆಂಪು ಬಣ್ಣಕ್ಕೆ ತಿರುಗುತ್ತವೆ. ಈ ಹೂಗಳಿಗೆ ಹ್ಯಾಪಿ ಏಲಿಯನ್ ಆರ್ಕಿಡ್‌ಗಳೆಂದೂ ಕರೆಯುವರು. ತೆಳುವಾದ ನಾಲಿಗೆ ಆಕಾರದ ಎಲೆಗಳಿಂದ ಕೂಡಿರುವ ಈ ಸಸ್ಯದ ಕಾಂಡಗಳು ಉದ್ದವಾಗಿರುವುದೇ ಹೆಚ್ಚು.

ಜೀವವಿಕಾಸವಾದದ ಪಿತಾಮಹರಾದ ಚಾರ್ಲ್ಸ್‌ಡಾರ್ವಿನ್ 1831 ರಿಂದ 1836ರ ಸಮಯದಲ್ಲಿ ದಕ್ಷಿಣ ಅಮೆರಿಕ ಭಾಗಗಳಿಗೆ ಯಾನ ಕೈಗೊಂಡಿದ್ದ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಈ ಪ್ರಬೇಧದ ಸಸ್ಯವನ್ನು ಪತ್ತೆಹಚ್ಚಿದನು. ಇದರ ಹೂಗಳಲ್ಲಿ ಕಂಡುಬರುವ ದಳಗಳು ಚಪ್ಪಲಿ ರೆಕ್ಕೆಗಳನ್ನು ಹೋಲುವುದರಿಂದ ಇದನ್ನು ಡಾರ್ವಿನ್ ಸ್ಲಿಪ್ಪರ್ ಹೂವಿನ ಸಸ್ಯ ಅಥವಾ ಕ್ಯಾಲ್ಸಿಯೋಲೇರಿಯಾ ಡಾರ್ವಿನಿ ಎಂದೂ ಹೆಸರಿಸಲಾಗಿತ್ತು. ಆದರೆ ಈಗ ಆ ಹೆಸರಿನಿಂದ ಕರೆಯುವುದನ್ನು ನಿಲ್ಲಿಸಲಾಗಿದೆ.

ತುಸು ದೂರದಿಂದ ನೋಡಿದರೆ ಬಂಡೆಗಳ ಮೇಲೆ ಸಾಲಾಗಿ ಸಾಗುತ್ತಿರುವ ಕೇಸರಿ ಬಣ್ಣದ ಪೆಂಗ್ವಿನ್‌ಗಳಂತೆ ಗೋಚರಿಸುವ ಈ ಸಸ್ಯಗಳು ಸದಾಕಾಲ ತಂಪು ಹವೆಯನ್ನು ಬಯಸುತ್ತವೆ. ಉಷ್ಣಾಂಶ ಹೆಚ್ಚಿರುವ ಪ್ರದೇಶದಲ್ಲಿ ಇವು ಬೆಳೆಯುವುದಿಲ್ಲ. ಹಮ್ಮಿಂಗ್ ಬರ್ಡ್‌ನಂತಹ ಪಕ್ಷಿಗಳು ಈ ಸಸ್ಯದ ಹೂವಿನಲ್ಲಿನ ತುಟಿಗಳಂತಹ ದಳಗಳನ್ನು ಕಚ್ಚಿ ತಿನ್ನುವಾಗ ಅದರಲ್ಲಿನ ಪರಾಗರೇಣುಗಳು ಶಲಾಕೆಯನ್ನು ತಲುಪುತ್ತವೆ. ಈ ರೀತಿಯಾಗಿ ಪರಾಗಸ್ಪರ್ಶ ನಡೆಸುವ ಮೂಲಕ ಹೂವು ಬೇಸಿಗೆ ಕಾಲಗಳಲ್ಲಿ ಸಂತಾನೋತ್ಪತ್ತಿ ಕ್ರಿಯೆ ನಡೆಸುತ್ತದೆ.

■ ಪ.ನಾ.ಹಳ್ಳಿ.ಹರೀಶ್ ಕುಮಾರ್